ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರಾಣಿಬೆನ್ನೂರು ನಗರಕ್ಕೆ ಇನ್ನೂ ಸರ್ಕಾರಿ ಆಯುರ್ವೇದ ಆಸ್ಪತ್ರೆ ಮಂಜೂರಾಗಿರುವುದಿಲ್ಲ. ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ತಾಲ್ಲೂಕು ಕೇಂದ್ರಗಳಲ್ಲಿ 6 ರಿಂದ 10 ಹಾಸಿಗೆಗಳ ಸರ್ಕಾರಿ ಆಯುರ್ವೇದ ಆಸ್ಪತ್ರೆ ತೆರೆಯುವ ಕಾರ್ಯಕ್ರಮವು ಜಿಲ್ಲಾ ಪರಿಷತ್ತಿನ ಯೋಜನೆಯಾದ ಕಾರಣ, ಸಂಬಂಧಿಸಿದ ಜಿಲ್ಲಾ ಪರಿಷತ್ ಇದೂವರೆವಿಗೂ ಇದಕ್ಕೆ ಬೇಕಾದ ಆಯವ್ಯಯವನ್ನು ಯೋಜನೆ ಅಡಿಯಲ್ಲಿ ನಿಗಧಿಪಡಿಸಿಕೊಂಡಿಲ್ಲ. ಹಾಗೂ ಸೂಕ್ತ ಪ್ರಸ್ತಾವನೆಯನ್ನು ನೀಡಿಲ್ಲದ ಕಾರಣ ಇಲ್ಲಿಯವರೆಗೆ ಮಂಜೂರಾತಿ ಮಾಡಲಾಗುವುದಿಲ್ಲ. ಆದರೆ 1993-94 ನೇ ಸಾಲಿನಲ್ಲಿ ಈ ಬಗ್ಗೆ ಬೇಕಾಗುವ ಅಗತ್ಯ ಆಯವ್ಯಯಗಳನ್ನು ಜಿಲ್ಲಾ ಪರಿಷತ್ತು ನಿಗಧಿ ಪಡಿಸಿಕೊಂಡಿರುವುದರಿಂದ 1993-94ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಶ್ರೀ ಕೆ. ಬಿ. ಕೋಳಿವಾಡ : ಸನ್ಮಾನ್ಯ ಅಧ್ಯಕ್ಷರೆ, ರಾಣಿಬೆನ್ನೂರು ನಗರದಲ್ಲಿ ಆಯುರ್ವೇದಿಕ್ ಆಸ್ಪತ್ರೆಯನ್ನು ಪ್ರಾರಂಭಿಸಬೇಕಾದಂಥ ಪ್ರಸ್ತಾವನೆ ಬಂದಿಲ್ಲವೆಂದು ಹೇಳಿದ್ದಾರೆ. ಈಗ ಪ್ರಸ್ತಾವನೆ ಬಂದರೆ ತಾವು ಮಂಜೂರು ಮಾಡುತ್ತೀರೋ ? ಮತ್ತು ಆಸ್ಪತ್ರೆಗೆ ಬೇಕಾದಂಥ ಕಟ್ಟಡಗಳು ಈಗಾಗಲೇ ಅಲ್ಲಿ ಸಾಕಷ್ಟು ಅವೈಲೆಬಲ್ ಇರುವುದರಿಂದ ಈ ವರ್ಷ ಮಂಜೂರು ಮಾಡಿಕೊಡುತ್ತೀರೋ ಹೇಗೆ?

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಮುಖ್ಯ ಮಂತ್ರಿಗಳ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆ ಬಂದರೆ, ಅದನ್ನು ಬೇಗನೆ ಮಂಜೂರು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

<u>ವಿಷಯ : ರಾಜ್ಯದಲ್ಲಿ ಅಕ್ಷಯ ಯೋಜನೆ</u>

100

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ಷಯ ಯೋಜನೆ ಯಾವಾಗ ಜಾರಿಗೆ ಬಂದಿತು?

ಆ) ಈ ಯೋಜನೆ ಜಾರಿಗೆ ಬಂದಾಗಿನಿಂದಲೂ ಪ್ರತಿ ಜಿಲ್ಲೆಗೆ ಹಣ ತಿಂಗಳು ವಿತರಣೆ ಮಾಡಲಾಗಿದೆಯೆ?

ಇ) ಕೆಲವು ಕಡೆ ಹಣದ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಒಂದು ವರ್ಷಕ್ಕೆ ಈ ಯೋಜನೆಗೆ ಎಷ್ಟು ಹಣ ಬೇಕಾಗುವುದು (ವಿವರ ನೀಡುವುದು)

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಅಕ್ಷಯ ಯೋಜನೆ ನವಂಬರ್ - 91 ರಿಂದ ಜಾರಿಗೆ ಬಂದಿತು. ಆದರೆ ಜೂನ್ - 92 ರಿಂದ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಅ) - ಇಲ್ಲಾ -
ಇ) - ಬಂದಿಲ್ಲ -
ಈ) ತಿಂಗಳಿಗೆ ತಲಾ 5 ಕೋಟಿಯಂತೆ 10 ತಿಂಗಳ ಶೈಕ್ಷಣಿಕ ಅವಧಿಗೆ ಒಟ್ಟು 50 ಕೋಟಿ ರೂಪಾಯಿಗಳು ಬೇಕಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದಂಥ ಪ್ರಶ್ನೆ ತಾವು ಗಮನಿಸಬೇಕು. ಇವರ ಉತ್ತರ ನೋಡಿದಾಗ ಪ್ರಾರಂಭದಲ್ಲಿ ಅಕ್ಷಯ ಯೋಜನೆಗೆ ಒಂದು ಬಾಲಗ್ರಹ ಬಡಿದಂತಾಗಿದೆ. ನವಂಬರ್ 91 ರಿಂದ ಜಾರಿಗೆ ಬರಬೇಕಾದ ಈ ಯೋಜನೆಗೆ ತಮ್ಮ ಉತ್ತರದ ಪ್ರಕಾರ ಜೂನ್ 90 ರಿಂದ ಜಾರಿಗೆ ಕೊಟ್ಟಿದ್ದೀರಿ, ಹೋಗಲಿ ನೀವು ಜಾರಿಗೆ ಕೊಟ್ಟ ನಂತರವಾದರೂ ಸಹ ಪ್ರತಿ ತಿಂಗಳು ಹಣ ಪಾವತಿ ಮಾಡಿದ್ದೀರಾ? ಎಂದರೆ ಇಲ್ಲವೆಂದು ಹೇಳಿದ್ದಾರೆ. ನಾನು ನೇರವಾಗಿ ಪ್ರಶ್ನೆ ಕೇಳುತ್ತೇನೆ. ತಾವು ಎಲ್ಲಿಯವರೆಗೆ ಹಣ ಪಾವತಿ ಮಾಡಿದ್ದೀರಿ , ಉಳಿದಂತ ಬಾಕಿ ಹಣವನ್ನು ಯಾವಾಗ ಪಾವತಿ ಮಾಡುತ್ತೀರಿ, ಸ್ಪಷ್ಟವಾಗಿ ಹೇಳಬೇಕು ಸ್ವಾಮಿ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೇ, ಈ ಯೋಜನೆ ಜೂನ್ 92 ರಿಂದ ಜಾರಿಗೆ ಬಂದಿದ್ದು ನಿಜ. ಇದಕ್ಕಾಗಿ ಒಂದು ವರ್ಷಕ್ಕೆ ಸುಮಾರು 50 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸರ್ಕಾರ ಇದುವರೆಗೆ 91-92 ರಲ್ಲಿ ಆದೇಶ ಕೊಟ್ಟು ಸುಮಾರು 18 ಕೋಟಿ 7 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಇದರ ಪೈಕಿ ಸುಮಾರು 11 ಕೋಟಿ 71 ಲಕ್ಷ ರೂಪಾಯಿ ಜೂನ್‌ನಿಂದ ನಮ್ಮ ಈ ಫಲಾನುಭವಿಗಳಿಗೆ ವಿವಿಧ ಹಂತಗಳಲ್ಲಿ ಹಂಚಲಾಗಿದೆ. 92-93 ರಲ್ಲಿ ಈ ಯೋಜನೆಯಡಿಯಲ್ಲಿ ಇದುವರೆಗೆ ಹಣ ಬಿಡುಗಡೆ ಮಾಡಿಲ್ಲ. 6 ನೇ ತಿಂಗಳವರೆಗೆ ನಮಗೆ ಸುಮಾರು 30 ಕೋಟಿ ರೂಪಾಯಿ ಬೇಕಾಗುತ್ತದೆ. ಈ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಹಂಚುವ ವ್ಯವಸ್ಥೆಯನ್ನು ಮಾಡುತ್ತೇವೆ.

10.45 ಎ.ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಪ್ರಕಾರ 1992ರ ಜೂನ್- ಜುಲೈ- ಆಗಸ್ಟ್ ಮೂರು ತಿಂಗಳು ಮಾತ್ರ ದುಡ್ಡು ಕೊಟ್ಟಿದ್ದಾರೆ. ಅಂದಿನಿಂದ ಇಂದಿನವರೆಗೂ ಒಂದು ಪೈಸೆ ಕೊಟ್ಟಿಲ್ಲ. ಅವರು ಹೇಳಿದ ಪ್ರಕಾರ 30 ಕೋಟಿ ರೂಪಾಯಿಗಳು ಬಿಡುಗಡೆ ಮಾಡಬೇಕು. ಪ್ರತಿ ತಿಂಗಳು ಮಕ್ಕಳಿಗೆ ಅವರ ಪೆರೆಂಟ್ಸ್‌ಗೆ ಒಂದು ರೂಪಾಯಿ ಕೊಡುವುದರಿಂದ ಅಟೆಂಡೆನ್ಸ್ ಜಾಸ್ತಿಯಾಗುತ್ತದೆ ಎಂದು ಹೇಳಿದ್ದೀರಿ. ಈ ಯೋಜನೆ ಒಳ್ಳೆಯದೇ, ಆದರೆ ನಾನು ನೇರವಾಗಿ ಕೇಳುತ್ತಿದ್ದೇನೆ, ಈ 30 ಕೋಟಿ ರೂಪಾಯಿಗಳನ್ನು ಮತ್ತು ಉಳಿದಿರುವ ಬ್ಯಾಲೆನ್ಸ್ ಇವೆಲ್ಲವನ್ನೂ ಯಾವಾಗ ಬಿಡುಗಡೆ ಮಾಡುತ್ತೀರಿ? ಈ ಯೋಜನೆ ಮುಂದೆ ಜಾರಿಯಲ್ಲಿ ಇರುತ್ತದೆಯೋ ಇಲ್ಲವೋ, ಏಕೆಂದರೆ, 'ಅಕ್ಷಯ', 'ಆರಾಧನಾ', 'ವಿಶ್ವ', ಎಂದು ಯಾವುದೊಂದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧವಿಲ್ಲವೋ ಅದನ್ನು ಮಾಡಿ ಜನರಿಗೆ ವಂಚನೆ ಮಾಡುವುದು ಬೇಡ. ಈ ಯೋಜನೆಯನ್ನು ಮುಂದುವರಿಸುತ್ತೀರಾ? ಈ 30 ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಸ್ಪಷ್ಟವಾಗಿ ಉತ್ತರ ಕೊಡಿ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೆ ಹೇಳಿದ್ದೇನೆ. 30 ಕೋಟಿ ರೂಪಾಯಿಗಳನ್ನು ಈ ವರ್ಷವೇ ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಈ ವರ್ಷದ ಫೈನ್ಯಾನ್ಸಿಯಲ್ ಇಯರ್ ಎಂಡ್ ಆಗುವ ಮೊದಲೇ ಅಂದರೆ ಮಾರ್ಚ್ 31ರೊಳಗೆ ಮಾಡುತ್ತೇವೆ. ಅದರ ಬಗ್ಗೆ ಸಂಶಯ ಬೇಡ. ಈ ಯೋಜನೆಯ ಬಗ್ಗೆ ಬಡ್ಜೆಟ್, ಭಾಷಣದಲ್ಲೂಸಹ ಚರ್ಚೆಯಾಗಿದೆ. ಈ ಯೋಜನೆಯನ್ನು ಸ್ವಲ್ಪ ಮಾರ್ಪಾಟು ಮಾಡಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಮಾರ್ಪಾಡು ಮಾಡುವುದಕ್ಕೆ ಏನು ಕಾರಣ. ಇದು ಒಳ್ಳೆಯ ಯೋಜನೆ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಮಾನ್ಯ ಅಧ್ಯಕ್ಷರೇ, ನಾವು ವಿದ್ಯಾರ್ಥಿಗಳಿಗೆ ದಿವಸಕ್ಕೆ ಒಂದು ರೂಪಾಯಿ ಕೊಡುವುದು ಒಳ್ಳೆಯ ಯೋಜನೆಯಾಗಿದೆ. ಆದರೆ ಬ್ಯಾಂಕಿನವರು ನಮಗೆ ಸರಿಯಾಗಿ ಕೋಆಪರೇಷನ್ ಕೊಡುತ್ತಿಲ್ಲ. ಅಲ್ಲಲ್ಲಿ ಇದು ದುರುಪಯೋಗ ಆಗಿರುವಂತಹ ಆಪಾದನೆಗಳು ನಮಗೆ ಕಂಡುಬಂದಿದೆ. ಆದ್ದರಿಂದ ಪ್ರತಿ ದಿವಸ ಒಂದು ರೂಪಾಯಿ ಕೊಡುವ ಬದಲು ಆ ವಿದ್ಯಾರ್ಥಿಗಳಿಗೆ ಅಷ್ಟೇ ಹಣದಲ್ಲಿ ಅವರಿಗೆ ಸಮವಸ್ತ್ರ, ಪಠ್ಯಪುಸ್ತಕಗಳು, ಮಧ್ಯಾಹ್ನದ ಉಪಹಾರ, ಪ್ರವಾಸ, ಮನರಂಜನೆ ಕೊಡುವ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ದುರುಪಯೋಗ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದರೆ ದುರುಪಯೋಗ ಆಗಿಲ್ಲ ಎನ್ನುತ್ತೀರಿ. ಅಂದರೆ ಈ ಕಾರ್ಯಕ್ರಮ ಒಳ್ಳೆಯದೆಂದು ನಾವು ಅಪ್ರಿಷಿಯೆಟ್ ಮಾಡುತ್ತೇವೆ. ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಹಾಗೆ ನಿಮ್ಮ ಮತ್ತು ಬಂಗಾರಪ್ಪನವರ ಬಡಿದಾಟದಲ್ಲಿ ಈ ಯೋಜನೆಯನ್ನು ಏಕೆ ನಿಲ್ಲಿಸುತ್ತೀರಿ? ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸರ್ಕಾರ ಜನರಿಗೆ ಭರವಸೆ ಕೊಟ್ಟಿದೆ, ಈ ಯೋಜನೆಯನ್ನು ಮುಂದುವರಿಸಬೇಕು. ಮಾರ್ಚ್ ತಿಂಗಳ ಒಳಗೆ 30 ಕೋಟಿ ಹಣವನ್ನು ಬಿಡುಗಡೆ ಮಾಡಬೇಕು. ಈ ಯೋಜನೆಯ ಮಾರ್ಪಾಡು ಮಾಡಬಾರದು. ನೀವೆ ದೇಶದ ಉದ್ದಗಲಕ್ಕೂ ಹೇಳಿಕೊಂಡು ಬಂದಿದ್ದೀರಿ. ಈಗ ಅದನ್ನು ಏಕೆ ವಾಪಸ್ಸು ತೆಗೆದುಕೊಳ್ಳುತ್ತೀರಿ. ಜನರಿಗೆ ಅನುಕೂಲವಾಗಿದೆ. ಈ ಯೋಜನೆಯಿಂದ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲವಿದೆ. ಇದನ್ನು ಮಾರ್ಪಾಡು ಮಾಡಬಾರದು.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಮಾನ್ಯ ಅಧ್ಯಕ್ಷರೇ, 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ಆದರೆ ಈ ಯೋಜನೆಯಲ್ಲಿ ಕೆಲವೊಂದು ಆಪಾದನೆಗಳು ಬಂದಿರುವುದರಿಂದ ಮಾರ್ಪಾಡು ಮಾಡಿ ಈ ಅಕ್ಷಯ ಯೋಜನೆಯನ್ನು ಮುಂದುವರೆಸುತ್ತೇವೆ.

<u>ವಿಷಯ : ಚಿಕ್ಕೋಡಿ ಪಟ್ಟಣದಲ್ಲಿ ನಾಯಿ ಕಡಿತಕ್ಕೆ ಲಸಿಕೆ ದೊರೆಯದಿರುವುದು.</u>

232

ಶ್ರೀ ಎಸ್. ಎಸ್. ಭೀಮಣ್ಣನವರು (ಚಿಕ್ಕೋಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?